# ಭಯ

"ಸಿನೆಮಾ ಎಲ್ಲಾ ಬಿಟ್ಹಾಕು ಮಗಾ, ಇನ್ನೂ ಒಸಾಮ ಬಿನ್ ಲಾದೆನ್ ಸಿಕ್ಕಿಲ್ಲ, ಇರಾಕ್‌ನಲ್ಲಿ ಪ್ರತೀದಿನ ನೂರಾರು ಜನ ವ್ಯರ್ಥವಾಗಿ ಜೀವ ಕಳ್ಕೊತಿದಾರೆ, ಆಗ್ಲೇ ಜಾರ್ಜ್ ಬುಷ್ ಇರಾನ್ ಮೇಲೆ ಯುದ್ಧಕ್ಕೆ ರೆಡಿಯಾಗಿದಾನೆ. ಇರಾನ್ ಕೂಡಾ ನಾನೂ ಯುದ್ಧಕ್ಕೆ ರೆಡಿ ಅಂತಾ ಕಾಲು ಕೆರೆದುಕೊಂಡು ನಿಂತಿದೆ, ಅಮೇರಿಕಾದ ಈ ಕೆಲಸಕ್ಕೆ ಸಹಾಯ ಮಾಡುವ ರಾಷ್ಟ್ರಗಳ ವಿರುದ್ಧವೂ ಕೆಂಡ ಕಾರಿದೆ. ಇದಕ್ಕಿಂತಾ ಗ್ಲೋಬಲ್ ಹಾರರ್ ಬೇಕಾ?"

"ಗ್ಲೋಬಲ್ ಅಂದ ಕೂಡಲೇ ನೆನಪಿಗೆ ಬಂತು, ಧ್ರುವಗಳಲ್ಲಿರೋ ಮಂಜುಗಡ್ಡೆ ಕರಗಿ ಹರಿದು ಸಮುದ್ರಗಳ ನೀರಿನ ಮಟ್ಟ ಏರ್ತಾ ಇದೆ! ಓರ್ಝೋನ್ ಪದರದ ತೂತು ದೊಡ್ಡದಾಗುತ್ತಾ ಇರೋದಕ್ಕೆ ಅಭಿವೃದ್ಧಿ ಹೊಂದಿದ ದೇಶಗಳ ಐಷಾರಾಮಿ ಜೀವನ ಶೈಲಿಯೇ ಕಾರಣ ಅಂತಾ ನಾವೆಲ್ಲ ಬಡ್ಕೊಂಡ್ರೆ ಅಭಿವೃದ್ಧಿ ಹೊಂದಿಲ್ಲದ ಮತ್ತು ಹೊಂದುತ್ತಿರುವ ದೇಶಗಳ ಇಂಧನ ಬಳಕೆಯ ಅಪಕ್ವ ವಿಧಾನಗಳೇ ಕಾರಣ ಅಂತ ಅವರೆಲ್ಲ ಬಡ್ಕೋತಾರೆ."

"ನೂರಾರು ರೋಗಗಳು, ಆಹಾರ-ಶೈಲಿಗಳು, ಡಯಟ್‌ಗಳು, ಚಿಕಿತ್ಸಾ ವಿಧಾನಗಳು! ನನಗನಿಸಿದಂತೆ ಈ ಅಭಿವೃದ್ಧಿ ಅನ್ನೋದಕ್ಕಿಂತ ದೊಡ್ಡ ಹಾರರ್ ಸ್ಟೋರಿ ಬೇರೆ ಇಲ್ಲ." ಎಲ್ಲರೂ ನಕ್ಕರು.

"ಅದಿರಲಿ, ಆರ್ಮ್‌ಸ್ಟ್ರಾಂಗ್‌ನ ಕತ್ತು ಕೊಯ್ಯುವ ವಿಡಿಯೋಗಿಂತ ಬೇರೆ ಭಯಾನಕವಾದದ್ದೇನಾದ್ರೂ ಬೇಕೇ?"

"ಹೌದು. ಅಷ್ಟೊಂದೆಲ್ಲ ದೂರ ಯಾಕೆ? ನಮ್ಮ ದೇಶದ್ದೇ ಇದೆಯಲ್ಲಾ? ನಿಥಾರಿಯ ಕೊಲೆಗಳು, ಚರಂಡಿಯಲ್ಲಿ ಕಂಡುಬಂದ ಹಸುಳೆಗಳ ಅಸ್ಥಿಪಂಜರಗಳು!"

"ಮುಂಬೈ ಸರಣಿ ಬಾಂಬ್ ಸ್ಫೋಟಗಳು..."

"ಬೆಂಗಳೂರಿನ ಬೀದಿ-ನಾಯಿ ಹಾವಳಿ, ಮಕ್ಕಳ ಸಾವು, ಆತ್ಮಹತ್ಯೆಗಳು, ಅಪಘಾತಗಳು..."

"ಒಂದು ಫೋಟೋ ಈ-ಮೇಲ್‌ನಲ್ಲಿ ಬಂದಿತ್ತು, ಹೆಬ್ಬಾಳ ಏರುಸೇತುವೆಯ ಮೇಲೆ ಆದ ಅಪಘಾತದ್ದು. ಎಷ್ಟು ಭಯಾನಕವಾಗಿತ್ತು ಗೊತ್ತಾ? ಆ ಮನುಷ್ಯ ಓಡಿಸುತ್ತಿದ್ದ ಸ್ಕೂಟರ್ ಒಂದು ಕಡೆಗೆ ಬಿದ್ದು ಹೋಗಿತ್ತು. ಎದೆ, ತಲೆಯೆಲ್ಲ ನೊಜ್ಜುಗೊಜ್ಜಾಗಿದ್ದ ದೇಹದ ಮೇಲೆ ಯಾರೋ ಪ್ಲಾಸ್ಟಿಕ್ ಹೊದೆಸಿದ್ದರು ಅಂತಾ ಕಾಣುತ್ತೆ, ಗಾಳಿಗೆ ಸ್ವಲ್ಪ ತೆರೆದಿತ್ತು. ಅದಕ್ಕೆ ಒಂದಡಿ ದೂರದಲ್ಲೇ ಟ್ರಾಫಿಕ್‌ನಲ್ಲಿ ಕಾದು ನಿಂತ ವಾಹನಗಳು ಮತ್ತು ಇದೆಲ್ಲ ಸಾಮಾನ್ಯವೆಂಬಂತೆ ನಿರ್ವಿಕಾರ ಭಾವ ಹೊತ್ತು ನಿಂತ ಅವುಗಳ ಚಾಲಕರು..."

"ನನ್ನದೊಬ್ಬಳು ಸ್ನೇಹಿತೆ ಆಕ್ಸಿಡೆಂಟ್ ವಿಷಯ ಬಂದಾಗೆಲ್ಲ ಇದೊಂದು ಪ್ರಸಂಗ ಹೇಳ್ತಾಳೆ, ಅವಳಿಗೂ ಅವಳ ಫ್ರೆಂಡ್ ಹೇಳಿದ್ದಂತೆ-ಹೆಬ್ಬಾಳ ಫ್ಲೈ ಓವರ್ ಮೇಲೆ ಬೈಕಿನಲ್ಲಿ ವೇಗವಾಗಿ ಹೋಗುತ್ತ ತಡೆಗೋಡೆಗೆ ಬಲವಾಗಿ ತನ್ನ ಹೆಲ್ಮೆಟ್‌ತಲೆ ಗುದ್ದಿಕೊಂಡ ಹುಡುಗನೊಬ್ಬ, ಹಾಗೇ ಎದ್ದು ಕಷ್ಟದಿಂದ ಅಲ್ಲೆಲ್ಲೋ ಕಾಯುತ್ತಿದ್ದ ಅವನ ಸ್ನೇಹಿತರನ್ನು ತಲುಪಿಕೊಂಡನಂತೆ. ಅವರು ಅವನ ಕತ್ತಿನಿಂದ ರಕ್ತ ಬರುತ್ತಿದ್ದುದನ್ನು ಕಂಡು ಹೆದರಿ, ಹೆಲ್ಮೆಟ್ ತೆಗೆಯುವಂತೆ ಹೇಳಿದರಂತೆ. ಅವನು ತೆಗೆಯಲೆತಿಸಿ ಸೋತ ಮೇಲೆ, ಹಿಡಿದುಕೊಂಡಿದ್ದ ಹೆಲ್ಮೆಟ್ ಬಿಚ್ಚಲು ಅವನ ಸ್ನೇಹಿತರೂ ಸಹಾಯ ಮಾಡಲೆಳಸಿ ಬಲವಾಗಿ ಎಳೆದರಂತೆ. ತಲೆಗೆ ಬಲವಾದ ಏಟಾಗಿ ಗೊತ್ತಾಗದೇ ಇದ್ದ ಆ ಹುಡುಗನ ತಲೆಯೇ ಹೆಲ್ಮೆಟ್ ಜೊತೆಗೆ ಬಂದುಬಿಟ್ಟಿತಂತೆ!"

"ವ್ಯಾಕ್!" ಎಲ್ಲರೂ ಅಸಹ್ಯಿಸಿಕೊಂಡರು.

"ಅದಕ್ಕೇನು, ವಿಕ್ಟೋರಿಯಾಕ್ಕೋ, ಬೌರಿಂಗ್‌ಗೋ ಹೋದರೆ ದಿನಾ ಹೋದರೆ ಅದಕ್ಕೂ ಭಯನಾಕವಾದ ನಿಜ-ಸಂಗತಿಗಳನ್ನೇ ನೋಡಬಹುದು."

"ಹೌದು, ನಾವೊಂಥರಾ ಹಾರರ್ ಶೋ ಒಳಗೇ ಬದುಕ್ತಾ ಇದೀವಿ", ಅರುಣ ಎಲ್ಲರ ಮಾತುಗಳಿಗೂ ಒಂದು ನಿರ್ಧಾರಕವಾದ ಅಂತ್ಯ ಕೊಟ್ಟ.

"ಮ್... ಹೌದು" ಒಂದಿಬ್ಬರು ಹೂಂಗುಟ್ಟಿದರು, ಉಳಿದವರು ಮೌನವಾಗಿ ಸಮ್ಮತಿ ಸೂಚಿಸಿದರು.

"ಅದೆಲ್ಲ ಬಿಟ್ಹಾಕಿ, ನಾನೀಗ ನಿಮಗೊಂದು ಕ್ಲಾಸಿಕ್ ಹಾರರ್ ಸ್ಟೋರಿ ಹೇಳ್ತೀನಿ" ಅರುಣ ಹೇಳಿದ ಕೂಡಲೇ ಎಲ್ಲರೂ ಮೌನವಾದರು. ಸತೀಶ ಸುಮ್ಮನಿರದೇ, "ಸ್ಟೋರಿನೋ, ರಿಯಲ್ ಸ್ಟೋರಿನೋ?" ಅಂತಾ ಕೇಳಿದ.

"ನಿಜವಾಗಿ ನಡೆದದ್ದೇ, ಆದರೆ ನಮ್ಮಪ್ಪನ ಕಾಲದ್ದು!"

"ಹೌದಾ? ಹಾಗಾದ್ರೆ ನಿಮ್ಮಪ್ಪನಿಗೂ ಗೊತ್ತಾ?"

"ಯಾಕಿಲ್ಲ, ಈ ಕತೆಯಲ್ಲಿ ನಮ್ಮಪ್ಪನ ಖಾಸಂಖಾಸ್ ಸ್ನೇಹಿತನೂ ಇದಾನೆ!"

"ಮತ್ತೇನೇನೆಲ್ಲ ಇದೆ? ಈ ಕತೆಯಲ್ಲಿ?" ಹ್ಯಾರಿ ಮೈಮುರಿದುಕೊಳ್ಳುತ್ತ ಕೇಳಿದ.

"ಈ ಕತೆಯಲ್ಲಿ ಭೂತ ಇದೆ, ಭೂತದ ಬಂಗ್ಲೆ ಇದೆ, ಜೊತೆಗೆ ನಿಜವಾದ ಹಾರರ್ ಇದೆ!" ಹುಡುಗರೆಲ್ಲ ಮೌನವಾದರು. ಅರುಣ ಕತೆ ಶುರುಮಾಡಿದ...

------------

ಬೆಂಗಳೂರು-ಚಿಕ್ಕಮಗಳೂರು ಬಸ್ಸು ಬೇಲೂರು ತಲುಪಿದಾಗ ರಾತ್ರಿ ಒಂದೂ ಮುಕ್ಕಾಲು ಆಗುತ್ತಿತ್ತು. ಅರುಣ ಮತ್ತವನ ಏಳು ಜನ ಸ್ನೇಹಿತರು ಬೆಂಗಳೂರಿನಿಂದ ವಾರಾಂತ್ಯಕ್ಕೋಸ್ಕರ ಅವನ ಊರಾದ ಬೇಲೂರಿಗೆ ಬಂದಿಳಿದಿದ್ದರು. ಅರುಣನ ಅಪ್ಪ ಮಾಸ್ತರಿಕೆಯ ಜೊತೆ ಬೇಲೂರು ತಾಲೂಕು ಬೆಣ್ಣೂರಿನಲ್ಲಿ ತಮ್ಮ ಪಿತ್ರಾರ್ಜಿತ ಜಮೀನು-ತೆಂಗಿನ ತೋಟವನ್ನೂ ಮಾಡಿಕೊಂಡಿದ್ದರು. ಬೆಣ್ಣೂರು ಯಗಚಿ ಅಣೆಕಟ್ಟಿನ ಯೋಜನೆಯಲ್ಲಿ ಮುಳುಗಡೆಯಾದಾಗ, ಬಂದ ಪರಿಹಾರದ ಹಣದಲ್ಲಿ ಬೇಲೂರು-ಗೋಣಿಬೀಡು ರಸ್ತೆಯಲ್ಲಿ ಬೇಲೂರಿನಿಂದ ಐದು ಕಿಲೋಮೀಟರ್ ದೂರದಲ್ಲಿ ತೆಂಗಿನ ತೋಟ-ಹೊಲ ಖರೀದಿ ಮಾಡಿ, ಹೊಸದಾಗಿ ಬೋರ್ ಕೊರೆಸಿ, ಫಾರ್ಮ್‌ಹೌಸ್ ಥರಾ ಮಾಡಿಕೊಂಡಿದ್ದರು. ತೋಟದಲ್ಲಿದ್ದ ಇವರದಲ್ಲದ ಹಳೆಯದೊಂದು ಮನೆಯನ್ನು ಕೆಡವಿ, ಈಚೆಗೆ ತಾವು ನಿವೃತ್ತಿಯಾದಾಗ ಸಿಕ್ಕ ಹಣದಲ್ಲಿ ಹೊಸ ಮನೆಯೊಂದನ್ನು ಕಟ್ಟಿದ್ದರು. ಆ ಮನೆಯ ಗೃಹಪ್ರವೇಶದ ಸಲುವಾಗಿ ಅರುಣ ಬೆಂಗಳೂರಿನಿಂದ ತಾನು ಕೆಲಸ ಮಾಡುತ್ತಿದ್ದ ಕಂಪನಿಯ ಈ ಸ್ನೇಹಿತರನ್ನು ಕರೆದುಕೊಂಡು ಬೇಲೂರಿಗೆ ಬಂದಿಳಿದಿದ್ದ.

ಬಸ್ಸು ಇಳಿದವರೇ ಸ್ನೇಹಿತರು ಬಸ್‌ಸ್ಟಾಂಡಿನ ಬೆಂಚುಗಳಲ್ಲಿ ತಂತಮ್ಮ ಬ್ಯಾಗುಗಳ ಸಮೇತ ಆಸೀನರಾದರು. ಅರುಣ ಜೀಪು ತರ ಹೇಳಲು ತನ್ನ ಅಪ್ಪನ ಮೊಬೈಲ್‌ಫೋನ್‌ಗೆ ಕರೆ ಹಚ್ಚಿದ. ಅತ್ತ ಕಡೆ ಮೊಬೈಲ್ ರಿಂಗ್ ಆಗುತ್ತಿದ್ದರೂ ಯಾರೂ ಎತ್ತುತ್ತಿರಲಿಲ್ಲ. ಸ್ವಲ್ಪ ಸಮಯ ಬಿಟ್ಟು ಮತ್ತೆ ಪ್ರಯತ್ನಿಸಿದರಾಯಿತು ಎಂದುಕೊಂಡು ಎಲ್ಲರೂ ಬೆಂಚ್ ಮೇಲೆ ಕುಳಿತುಕೊಂಡು ಮಾತು ಶುರುಮಾಡಿಕೊಂಡರು.

ಬೇಸಿಗೆ ಆಗ ತಾನೇ ಶುರುವಾಗಿದ್ದುದರಿಂದ ಬಿಸಿಲಿಗೆ ಸುಟ್ಟ ಹಗಲಿನ ನಂತರದ ರಾತ್ರಿ ಬೆಚ್ಚಗಿದ್ದರೂ ಆಹ್ಲಾದಕರವಾಗಿತ್ತು. ಹೊರಡುವಾಗಲೇ ಊಟವೆಲ್ಲ ಮುಗಿದಿದ್ದುದರಿಂದ ಎಲ್ಲರೂ ಹಾಯಾಗಿ ಕುಳಿತು ಅವರಿವರಾಡಿದ ಮಾತುಗಳಿಗೆ ಕಿವಿಕೊಟ್ಟರು, ಅವುಗಳಿಗೆ ತಮ್ಮ ಮಾತುಗಳನ್ನೂ ಸೇರಿಸಿದರು. ಯಥಾ ಪ್ರಕಾರ ಆಫೀಸಿನಿಂದ ಶುರುವಾದ ಮಾತು ಹುಡುಗಿಯರು, ಬೆಂಗಳೂರು, ಪಬ್, ಕ್ರಿಕೆಟ್, ರಾಜಕೀಯ, ಸಿನೆಮಾ ಎಲ್ಲವನ್ನೂ ಹಾದು ಕೊನೆಗೆ ಭೂತ-ಪಿಶಾಚಿಗಳಿಗೆ ಬಂದು ನಿಂತಿತು. ಅಮವಾಸ್ಯೆ ರಾತ್ರಿಯ ಕತ್ತಲಾಗಿದ್ದುದರಿಂದಲೂ, ಹುಡುಗರಿಗೆ ಮಾತನಾಡುವ ಹುಮ್ಮಸ್ಸಿದ್ದುದರಿಂದಲೂ ಎಲ್ಲರೂ ಯಾವುದು ಅತೀ ಭಯಾನಕ, ನಿಜವಾದ ಹಾರರ್ ಅಂದ್ರೆ ಏನು, ಪ್ರೇತಾತ್ಮಗಳಿವೆಯೇ ಮುಂತಾದ ಚರ್ಚೆಗಳನ್ನು ಮಾಡಲಾರಂಭಿಸಿದರು...

------------

"ಅಲ್ಲಿದೆಯಲ್ಲ, ಕತ್ತಲಲ್ಲಿ ಎತ್ತರಕ್ಕೆ ಕಪ್ಪಗೆ ಕಾಣ್ತಾ ಇದೆಯಲ್ಲಾ, ಆ ಕಟ್ಟಡ ಏನು ಗೊತ್ತೇನು?" ಅರುಣ ಬೇಲೂರು ಬಸ್‌ನಿಲ್ದಾಣದೆದುರು, ಕಾಂಪೌಂಡಿನ ಹೊರಗೆ ರಸ್ತೆಯಾಚೆ ಇದ್ದ ಕಟ್ಟಡದೆಡೆಗೆ ಕೈ ತೋರಿಸಿದ. ಎಲ್ಲರೂ ಅತ್ತೆಡೆ ನೋಡಿದರು.

"ಏನು?"

"ಅದು ಒಂದು ಸಿನೇಮಾ ಟಾಕೀಸ್!" ಎಲ್ಲರೂ ಕಣ್ಣು ಕಿಸಿದು ಕತ್ತಲಲ್ಲಿ ದಿಟ್ಟಿಸಿ ನೋಡಿದರು. ಬೀದಿ ದೀಪಗಳ ನೆರಳು ಬೆಳಕಿನಲ್ಲಿ ಆ ಕಟ್ಟಡ ಸಾಕಷ್ಟು ಹಳೆಯದರಂತೆ ಕಂಡಿತು.

"ಆದ್ರೆ ಅದಿನ್ನೂ ಅರ್ಧಂಬರ್ಧ ಕಟ್ಟಿರೋ ತರಹಾ ಇದೇ?" ಯಾರೋ ಕೇಳಿದರು.

"ಹೌದು, ಅದಿನ್ನೂ ಪೂರ್ಣವಾಗಿಲ್ಲ, ಪೂರ್ಣವಾಗೋದೂ ಇಲ್ಲ. ಯಾಕೇಂದ್ರೆ ಅದನ್ನು ಕಟ್ಟೋಕೆ ಶುರುಮಾಡಿಯೇ ಇಪ್ಪತ್ತು-ಇಪ್ಪತ್ತೈದು ವರ್ಷಗಳಾದವು. ಇಷ್ಟು ಕಟ್ಟಿಯಾದ ಮೇಲೆ ಕೆಲಸವೂ ನಿಂತು ಹೋಯಿತು!"

"ಯಾಕೇ?" ಕುತೂಹಲದಿಂದ ಎಲ್ಲರೂ ಕಿವಿಯಾದರು.

"ಅದನ್ನು ಕಟ್ಟೋಕೆ ಮುಂಚೆ ಆ ಜಾಗದಲ್ಲಿ ಬಹಳ ಹಳೆಯ ಕೆಲವು ಸಮಾಧಿಗಳಿದ್ದವಂತೆ. ಅವುಗಳನ್ನು ಕಟ್ಟಡದ ಒಳಕ್ಕೆ ಸೇರಿಸಿಕೊಂಡು, ಮಣ್ಣು ಎತ್ತರಿಸಿ ಈ ಟಾಕೀಸ್ ಕಟ್ಟಲಾರಂಭಿಸಿದ ಸ್ವಲ್ಪ ದಿನಕ್ಕೇ ಕಟ್ಟಡದ ಮೇಸ್ತ್ರಿಗೆ ರಾತ್ರಿ ಕನಸಿನಲ್ಲಿ ಈ ಟಾಕೀಸು ನರ ಬಲಿ ಕೇಳೋಕೆ ಶುರುಮಾಡಿತಂತೆ! ಅವನು ಅದನ್ನೆಲ್ಲ ಕಡೆಗಣಿಸಿ ಸುಮ್ಮನೆ ಕೆಲಸ ಮುಂದುವರೆಸಿದನಂತೆ. ಆಗಿಂದ ಈ ಕಟ್ಟಡದ ಕೆಲಸಕ್ಕೆ ಹತ್ತು ಹಲವು ವಿಘ್ನಗಳು ಬಂದೊದಗತೊಡಗಿದವಂತೆ. ಸುಮ್ಮಸುಮ್ಮನೇ ಕಟ್ಟುತ್ತಿದ್ದ ಗೋಡೆ ಕುಸಿದು ಕೆಲವರಿಗೆ ಪೆಟ್ಟಾಯಿತಂತೆ. ನೆಲದ ಸಮಪಾತಳಿ ನೋಡೋದಕ್ಕೆ ಉಪಯೋಗಿಸುವ ಪೈಪಿನಲ್ಲಿದ್ದ ನೀರು, ಕೆಲವೊಂದು ಕೋಣೆಗಳಲ್ಲಿ ಎಷ್ಟೇ ಪ್ರಯತ್ನ ಪಟ್ಟರೂ ಸಮಾನಾಂತರವಾಗಲಿಲ್ಲವಂತೆ. ಕಡೆಕಡೆಗೆ ಕೆಲಸ ಮಾಡಲು ಬರುತ್ತಿದ್ದವರೆಲ್ಲ ಒಬ್ಬೊಬ್ಬರಾಗಿ ಕಾಹಿಲೆ

ಬೀಳತೊಡಗಿದರಂತೆ. ಗುಣಮುಖರಾದ ಮೇಲೆ ಈ ಕಟ್ಟಡದ ಕೆಲಸಕ್ಕೆ ಬರಲೇ ಇಲ್ಲವಂತೆ. ಕೊನೆಗೆ ಇದೆಲ್ಲ ಅತಿರೇಕಕ್ಕೆ ಹೋಗಿ, ಒಂದು ಅಮಾವಾಸ್ಯೆಯ ರಾತ್ರಿಯಲ್ಲಿ..." ಅರುಣ ಕತೆ ನಿಲ್ಲಿಸಿ ಕೇಳುತ್ತಿದ್ದವರನ್ನೇ ನೋಡಿದ.

"ಏನಾಯ್ತು?" ಎಲ್ಲರೂ ಒಕ್ಕೊರಲಿನಿಂದ ಕೇಳಿದರು.

"ಕಟ್ಟಡದ ಮೇಸ್ತ್ರಿ ಇದೇ ಕಟ್ಟಡದ ಮೇಲಿನಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡನಂತೆ!"

"ಅಂತೂ ಟಾಕೀಸಿಗೆ ನರಬಲಿ ದಕ್ಕಿತು ಅನ್ನು?" ಸತೀಶ ಕೇಳಿದ.

"ಓಹೋ, ಆ ಮೇಸ್ತ್ರಿ ನಿಮ್ಮ ಅಪ್ಪನ ಸ್ನೇಹಿತನೇ?" ಹ್ಯಾರಿ ವಿಚಾರಿಸಿದ.

"ಅಲ್ಲ. ಅವನ್ಯಾವನೋ ಮಲೆಯಾಳದವನು. ಅವನು ಸತ್ತ ಮೇಲೆ ಈ ಕಟ್ಟಡದ ಕೆಲಸ ವಹಿಸಿಕೊಳ್ಳೋದಕ್ಕೆ ಯಾರೂ ಮುಂದೆ ಬರಲಿಲ್ಲವಂತೆ."

"ಮತ್ತೆ ನಿಮ್ಮ ಅಪ್ಪನ ಫ್ರೆಂಡ್‌ನ ಎಂಟ್ರಿ ಯಾವಾಗ ಈ ಕತೆಗೆ?" ಸತೀಶ ತಲೆಕೆಡಿಸಿಕೊಳ್ಳುತ್ತಿದ್ದ. ಅರುಣ ಅವನ ಪ್ರಶ್ನೆಗುತ್ತರಿಸದೇ ತನ್ನ ಕತೆ ಮುಂದುವರೆಸಿದ, "...ಹಾಗಾಗಿ, ಹಾಗೇ ಅರ್ಧಕ್ಕೇ ನಿಂತುಹೋದ ಈ ಕಟ್ಟಡ ಎಲ್ಲರ ಬಾಯಿಕತೆಗಳಿಗೆ, ಭಯಕ್ಕೆ ಕಾರಣವಾಗಿಹೋಯ್ತು! ಈ ಕಟ್ಟಡವನ್ನು ಕೆಡವುದಕ್ಕಾದರೂ ಪ್ರಯತ್ನ ಪಟ್ಟವರಿಗೂ ಕೂಡ ಹೀಗೇ ಏನೇನೋ ದುಃಸ್ವಪ್ನಗಳು, ದುರ್ವಾರ್ತೆಗಳು ಕಾಡಿ, ಕೊನೆಗೆ ಹೀಗೇ ಇದ್ದುಬಿಡಲಿ ಎಂದು ಈ ಜಾಗದ ಮಾಲಿಕರು ಕೈ ಚೆಲ್ಲಿ ಕುಳಿತರು."

"ಅವರೇನಾ ನಿಮ್ಮಪ್ಪನ ಸ್ನೇಹಿತ?" ಅದೂವರೆಗೂ ಸುಮ್ಮನಿದ್ದ ರಕ್ಷಿತ್ ಕೇಳಿದ.

"ಅಲ್ಲ!" ಅರುಣ ಮಾತು ನಿಲ್ಲಿಸಿ ಉಸಿರೆಳೆದುಕೊಂಡ. ಎಲ್ಲರೂ ರಸ್ತೆಯಾಚೆಗೆ ಕತ್ತಲಲ್ಲಿ ಕತ್ತಲಾಗಿ ನಿಂತಿದ್ದ ಆ ಕಟ್ಟಡವನ್ನು ನೋಡುತ್ತಿದ್ದವರು, ಯಾವುದಾದರೂ ಕಿಟಕಿ, ಯಾವುದಾದರೊಂದು ಗವಾಕ್ಷಿಯಲ್ಲಿ ಏನಾದರೂ ಕಂಡೀತೇ ಎಂಬಂತೆಲ್ಲ ಯೋಚನೆ ಮಾಡುತ್ತ ಸ್ತಬ್ಧರಾದರು.

"ಆವಾಗಿನಿಂದ ಈ ಟಾಕೀಸ್ ಪಾಳು ಬಿತ್ತು. ಹಗಲು ಹೊತ್ತಿನಲ್ಲಿ ಕುತೂಹಲಕ್ಕಾದರೂ ಜನ ಒಳಗೆಲ್ಲ ನೋಡಿ ಬರುತ್ತಿದ್ದರು, ಹಗಲಲ್ಲೇ ಒಳಗಡೆ ಯಾವುದೋ ಮೂಲೆಯಲ್ಲಿ ನಿಟ್ಟುಸಿರು, ಬಿಕ್ಕಳಿಕೆಗಳೆಲ್ಲ ಕೇಳಿದಂತಾಗಿ ಹೆದರಿಕೊಂಡು ರಾತ್ರಿ ಹೊತ್ತು ಅದರ ಬಳಿ ಸುಳಿಯಲೂ ಹೆದರುತಿದ್ದರು.

ಇದೆಲ್ಲ ಆಗಿ ಸುಮಾರು ಏಳೆಂಟು ವರ್ಷಗಳಾದ ಮೇಲೆ, ಹೀಗೇ–ಈ ಬಸ್‌ನಿಲ್ದಾಣದ ಜಾಗದಲ್ಲಿ ಮೊದಲು ಹಳೇ ಬಸ್‌ಸ್ಟಾಂಡ್ ಇತ್ತು–ಇಲ್ಲಿ ಅಪ್ಪನ ಕೆಲವು ಸ್ನೇಹಿತರು ರಾತ್ರಿ ಬಸ್ಸಿಗೆ ಕಾಯುತ್ತಾ ಕುಳಿತಿದ್ದರು."

"ಈಗ ಶುರುವಾಯ್ತು ನಿಜವಾದ ಕತೆ!" ಎಲ್ಲರೂ ಮತ್ತೆ ಕುತೂಹಲಿಗಳಾದರು.

"ಬೆಣ್ಣೂರು ಗಡಿ ಅಂತಾ ನಮ್ಮ ಹಳೆಯ ಊರು, ಊರು ತಲುಪಿಕೊಳ್ಳಲು ರಾತ್ರಿ ಬರಬಹುದಾದ ಬೆಂಗಳೂರು–ಚಿಕ್ಕಮಗಳೂರು ರೂಟಿನ ಬಸ್ಸಿಗೆ ಕಾಯುತ್ತ ಕುಳಿತವರು ಹೀಗೇ ಮಾತನಾಡುತ್ತಿದ್ದರು!"

"ನಿಮ್ಮಪ್ಪ ಅವರೊಳಗಿದ್ದರೆ?"

"ಇಲ್ಲ. ಆಗ ನಮ್ಮಪ್ಪ ಸಕ್ರೆಪಟ್ಟಣದಲ್ಲಿ ಕೆಲಸ ಮಾಡುತ್ತಿದ್ದರು. ಅಂದಹಾಗೆ ನಮ್ಮಪ್ಪನ ಆ ಸ್ನೇಹಿತನ ಹೆಸರು 'ರಾಮೇಗೌಡ' ಅಂತಾ! ಹೀಗೇ ಅವನೂ ಅವನ ಉಳಿದ ಸ್ನೇಹಿತರೂ ಬಸ್‌ಸ್ಟಾಂಡಿನಲ್ಲಿ ಬಸ್ಸು ಕಾಯುತ್ತ ಕುಳಿತವರು, ಈ ಕಟ್ಟಡದ ಬಗ್ಗೆ ಮಾತನಾಡಿಕೊಳ್ಳಲಾರಂಭಿಸಿದರು. ಕೊನೆಗೆ ಮಾತಿಗೆ ಮಾತು ಸೇರಿ ಜಿದ್ದು ಹತ್ತಿತು."

"ಜಿದ್ದು? ಹಂಗಂದ್ರೇನು?" ಹ್ಯಾರಿ ಕೇಳಿದ.

"ಅಂದ್ರೆ ಚಾಲೆಂಜ್! ಆ ಕಟ್ಟಡದೊಳಗೆ ಅವತ್ತು ರಾತ್ರಿ ಯಾರು ಒಬ್ಬರೇ ಧೈರ್ಯವಾಗಿ ಹೋಗಿ ಬರ್ತಾರೆ ಅಂತಾ ಹಠ ಕಟ್ಟಿದರು! ಯಾರ್ಯಾರು ಏನೇನು ಮಾತನಾಡಿದರೋ ಗೊತ್ತಿಲ್ಲ, ಕೊನೆಗೂ ರಾಮೇಗೌಡ ತಾನು ಹೋಗುತ್ತೇನೆ ಎಂದು ಪಂಥ ಸ್ವೀಕರಿಸಿದ. ಎಲ್ಲರೂ ಸೇರಿ ತಲೆಗೆ ನೂರು ರೂಪಾಯಿಯಂತೆ ಅವನಿಗೆ ಕೊಡುವುದೆಂದು ತೀರ್ಮಾನವಾಯಿತು. ಎಲ್ಲ ಸೇರಿ ಆರೇಳು ನೂರು ರೂಪಾಯಿಗಳು, ಆಗಿನ ಕಾಲಕ್ಕೆ ತುಂಬಾ ದೊಡ್ಡ ಅಮೌಂಟು!"

ಎಲ್ಲರೂ ಮೌನವಾಗಿ ಕತೆ ಕೇಳಿಸಿಕೊಳ್ಳುತ್ತ ಕುಳಿತಿದ್ದರು, ಅರುಣನ ಮೊಬೈಲ್ ರಾಗ ಹಾಡಿತು... 'ಅನಿಸುತಿದೆ ಯಾಕೋ ಇಂದು...' ಕತೆ ಹೇಳುವುದನ್ನು ನಿಲ್ಲಿಸಿ ಅರುಣ ಮೊಬೈಲ್‌ನಲ್ಲಿ ಮಾತನಾಡಲಾರಂಭಿಸಿದ. ಹುಡುಗರು ಕಣ್ಣು ತಿಕ್ಕಿಕೊಳ್ಳುತ್ತ ಉಸಿರು ಬಿಟ್ಟು ಮೈಮುರಿಯಲಾರಂಭಿಸಿದರು.

-----------

"ಜೀಪು ಗೋಣಿಬೀಡಿಗೆ ಹೋಗಿದೆಯಂತೆ, ಇನ್ನೂ ಮುಕ್ಕಾಲು ಗಂಟೆಯಾಗುತ್ತೆ ಅಂದರು. ಅಷ್ಟು ಹೊತ್ತಿಗೆಲ್ಲ ಬೇಲೂರು–ಮೂಡಿಗೆರೆ ಮಾರ್ಗವಾಗಿ ಧರ್ಮಸ್ಥಳದ ಬಸ್ಸು ಬಂದರೆ, ಸ್ವಲ್ಪ ರಿಕ್ವೆಸ್ಟ್ ಮಾಡಿಕೊಂಡು ಹತ್ತಿಬರೋಕಾಗುತ್ತಾ ನೋಡಿ, ಇಲ್ಲದಿದ್ದರೆ ಇಲ್ಲೇ ಇರಿ, ಜೀಪು ಬಂದ ಕೂಡಲೇ ಕಳಿಸುತ್ತೇನೆ ಅಂದರು" ತನ್ನ ಅಪ್ಪನ ಜೊತೆ ನಡೆದ ಸಂಭಾಷಣೆಯ ಮುಖ್ಯಾಂಶಗಳನ್ನು ಅರುಣ ಹುಡುಗರಿಗೆ ಅರುಹಿದ. ಕೆಲವರು ಎದ್ದು ಕಾಂಪೌಂಡ್‌ನ ಮೂಲೆಗಿದ್ದ ಮೂತ್ರಿಯೆಡೆಗೆ ನಡೆದರು, ನೀರಿನ ಬಾಟಲಿ ತೆಗೆದು ನೀರು ಕುಡಿದರು, ಎದ್ದು ನಿಂತು, ಮೈ ಕೈ ನೆಟ್ಟಗೆ ಮಾಡಿಕೊಂಡರು. ಇನ್ನೆರಡು ದಿನಗಳ ರಜೆಯಿದ್ದುದರಿಂದಲೂ ಅರುಣನ ಮನೆಯಲ್ಲಿ ನಾಳಿನ ಔತಣ ಮುಗಿದರೆ ಬೇಲೂರು, ಹಳೇಬೀಡು, ಆನೆ ಮಲ್ಲಪ್ಪನ ಗುಡ್ಡ ಅಂತೆಲ್ಲ ಸುತ್ತಬಹುದು ಎಂಬ ಖುಷಿಖುಷಿಯಾದ ಯೋಜನೆಗಳಿದ್ದುದರಿಂದಲೂ ಎಲ್ಲಕ್ಕಿಂತ ಮುಖ್ಯವಾಗಿ ಅರುಣನ ಕತೆ ಕುತೂಹಲಕರ ಘಟ್ಟದಲ್ಲಿದ್ದುದರಿಂದಲೂ ಯಾರಿಗೂ ಜೀಪು ಬರುವದು ತಡವಾದುದಕ್ಕೆ ಬೇಸರವಾಗಲಿಲ್ಲ. ಒಬ್ಬೊಬ್ಬರಾಗಿ ಚೆದುರಿಹೋಗಿದ್ದ ಹುಡುಗರು ಐದೇ ನಿಮಿಷದಲ್ಲಿ ಮತ್ತೆ ಬಸ್–ನಿಲ್ದಾಣದ ಬೆಂಚುಗಳಿಗೆ–ತಂತಮ್ಮ ಸ್ವಸ್ಥಾನಗಳಿಗೆ ಮರಳಿದರು. ಅರುಣ ಅರ್ಧಕ್ಕೇ ನಿಲ್ಲಿಸಿದ್ದ ಕತೆ ಹೇಳಲು ಶುರುಮಾಡಿಕೊಂಡ...

———————————

"ಈ ಟಾಕೀಸ್ ಒಳಗಡೆ ಅರ್ಧ ಕಟ್ಟಿದ ಬಾಲ್ಕನಿಯೂ, ಅದಕ್ಕೆ ಸ್ವಲ್ಪ ಎತ್ತರದಲ್ಲಿರೋ ಪ್ರೊಜೆಕ್ಟರ್‌ರೂಮೂ ಇವೆ. 'ರಾಮೇಗೌಡ' ತಾನು ಅಲ್ಲಿಗೆ ಹೋಗಿದ್ದರ ಗುರುತಾಗಿ ತನ್ನ ಟವೆಲ್ ಅಲ್ಲಿ ಬಿಟ್ಟು ಬರಬೇಕೆಂದು, ಮಾರನೇ ದಿನ ಬೇಲೂರಿಗೆ ಬಂದಾಗ ಹಗಲಿನಲ್ಲಿ ಎಲ್ಲರೂ ಹೋಗಿ ಆ ಟವೆಲ್ ತರುವುದೆಂದೂ ತೀರ್ಮಾನವಾಯಿತು. ರಾಮೇಗೌಡನನ್ನು ಹುರಿದುಂಬಿಸಲು ಇನ್ನುಳಿದವರು ಆಗಲೇ ತಮ್ಮಲ್ಲಿದ್ದ ನೂರೈವತ್ತು ರೂಪಾಯಿಗಳನ್ನು ಕೂಡಿಸಿಕೊಟ್ಟರು. ಎರಡು ಮಕ್ಕಳ ತಂದೆ–ರಾಮೇಗೌಡ, ಬೆಳಕಿಗೆ ಅಂತಾ ಬೆಂಕಿಪೊಟ್ಟಣವನ್ನು ತೆಗೆದುಕೊಂಡು ನಗುನಗುತ್ತಾ ಟಾಕೀಸ್‌ನೊಳಕ್ಕೆ ಹೋದ." ಅರುಣ ಮೌನವಾದ.

"ಆಮೇಲೆ?"

"ಆಮೇಲೇನು? ಇಲ್ಲಿ ಕಾಯುತ್ತ ಕುಳಿತವರು ಬೆಳಗಿನ ತನಕ ಕುಳಿತೇ ಇದ್ದರು. ಹೋದ ರಾಮೇಗೌಡ ವಾಪಸ್ಸು ಬರಲಿಲ್ಲ. ಯಾವಾಗಲೋ ಒಂದು ಹೊತ್ತಿನಲ್ಲಿ, ಯಾವುದೋ ಕಿಟಕಿಯಲ್ಲಿ ಸ್ವಲ್ಪ ಬೆಳಕು ಕಂಡಿತಂತೆ ಅಷ್ಟೇ. ಬೆಳಗಿನ ತನಕ ಇಲ್ಲೇ ಕುಳಿತಿದ್ದ ರಾಮೇಗೌಡನ ಸ್ನೇಹಿತರು, ಬೆಳಗಾಗುತ್ತಲೂ ಗುಂಪುಕಟ್ಟಿಕೊಂಡು ಟಾಕೀಸ್‌ನ ಒಳಹೊಕ್ಕು ನೋಡಿದರು. ರಾಮೇಗೌಡ ಒಂದು ಸಣ್ಣ ಕುರುಹೂ ಇಲ್ಲದಂತೆ ಕಾಣೆಯಾಗಿ ಹೋಗಿದ್ದ!"

"ವೋಹ್!" ಎಲ್ಲ ಹುಡುಗರೂ ಬೆಚ್ಚಿಬಿದ್ದರು.

"ಆಮೇಲೆ?"

"ಆಮೇಲೇನು? ಅವರಿವರಿಗೆ ತಿಳಿಸಿ, ಎಲ್ಲರೂ ಟಾಕೀಸ್‌ನ ಮೂಲೆ ಮೂಲೆಯೆಲ್ಲಾ ಹುಡುಕಿದರು. ರಾಮೇಗೌಡ ತಲುಪಿದ್ದ ಗುರುತಾಗಿ ಪ್ರೊಜೆಕ್ಟರ್ ರೂಮ್‌ನಲ್ಲಿ ಅವನ ಟವೆಲ್ ಬಿದ್ದಿತ್ತು ಅಷ್ಟೇ. ಇವರನ್ನು ಸುಮ್ಮನೆ ಹೆದರಿಸಲು ಅವನು ಏನಾದರೂ ದೊಡ್ಡ ಉಪಾಯ ಮಾಡಿರಬಹುದೆಂದು ಅವನ ನೆಂಟರಿಷ್ಟರ ಊರುಗಳಿಗೆ, ಅವನ ಹೆಂಡತಿ ಮನೆ ಕಡೆಯ ಊರುಗಳಿಗೆಲ್ಲ ಅಲೆದರು. ಅವನು ಎಲ್ಲೂ ಸಿಗಲಿಲ್ಲ. ಪೋಲಿಸ್ ಕೇಸಾಯ್ತು. ಆದರೂ ಈ ರಹಸ್ಯ ಬಗೆಹರಿಯಲಿಲ್ಲ. ಭೂತ ಪಿಶಾಚಿಗಳ ಕತೆಗಳನ್ನೆಲ್ಲ ಬರಿ ಅವರಿವರಿಂದ ಕೇಳಿ ತಿಳಿದಿದ್ದ ನಮ್ಮೂರಿನ ಜನಕ್ಕೆ, ನಮ್ಮಪ್ಪನ ಪೀಳಿಗೆಗೆ, ಸ್ನೇಹಿತರಿಗೆ, ಅವರುಗಳ ಕತೆಗಳಿಗೆ 'ರಾಮೇಗೌಡ' ನಿಜವಾದ, ತರ್ಕಬದ್ಧವಾದ ಉದಾಹರಣೆಯಾಗಿಬಿಟ್ಟ. ಕೊನೆಗೆ ರಾಮೇಗೌಡನ ಕಣ್ಮರೆಗೆ ಕಾರಣರಾಗಿದ್ದ ಸ್ನೇಹಿತರೆಲ್ಲ ದುಡ್ಡು ಹೊಂದಿಸಿ, ನಾಲ್ಕೈದು ಸಾವಿರದಷ್ಟು ಮಾಡಿ ಅವನ ಹೆಂಡತಿಗೆ ಕೊಟ್ಟರು, ಅಷ್ಟೇ!"

———————————

"ಏನಾಗಿರಬಹುದು ಅಂತೀರಾ?"

"ಏನಾಯ್ತು ಅಂಥಾ ಯಾರಿಗೆ ಗೊತ್ತು? ಗೊತ್ತಾಗಿದ್ದು 'ರಾಮೇಗೌಡ' ಒಬ್ಬನಿಗೆ. ಅವನೇ ವಾಪಸ್ಸು ಬರಲಿಲ್ಲವೆಂದಮೇಲೆ ಆವತ್ತು ರಾತ್ರಿ ಒಳಗಡೆ ಏನು ನಡೀತು, ರಾಮೇಗೌಡನಿಗೆ ಏನಾಯ್ತು ಅಂತಾ ತಿಳ್ಕೊಳ್ಳೋದಾದ್ರೂ ಹೇಗೆ?"

"ಈಗ ತಿಳ್ಕೋಬಹುದೇನೋ?" ಸತೀಶ ನುಡಿದ.

"ಏನೂ?" ಎಲ್ಲರೂ ಅರ್ಥವಾಗದೇ ಅವನನ್ನೇ ನೋಡಿದರು.

"ಅಂದ್ರೆ, ಇವತ್ತು, ಈಗ ನಮ್ಮಲ್ಲೇ ಯಾರಾದರೂ ಒಬ್ಬರು ಈ ಟಾಕೀಸ್ ಒಳ ಹೋಗಿ ಬರುವುದು."

"ಒಬ್ಬರೇ ಯಾಕೇ? ಎಲ್ಲರೂ ಕೂಡಿ ಹೋಗುವ" ರಕ್ಷಿತ್ ಹೇಳಿದ್ದನ್ನು ಕಂಡು ಅರುಣ ನಕ್ಕ.

"ಇದು ಪುಕ್ಕಲುತನದ ಪರಮಾವಧಿ!" ಎಲ್ಲರೂ ನಕ್ಕರು.

“ಯಾರಾದರೂ ಒಬ್ಬರು ಹೋಗುವ” ಸತೀಶ ಸಲಹೆ ಕೊಟ್ಟ, ಎಲ್ಲರೂ ಮೌನವಾದರು.

“ಹೇಗಿದ್ರೂ ಮೊಬೈಲ್‌ಗಳು ಇವೆ, ನೆಟ್‌ವರ್ಕ್ ಕೂಡಾ ಚೆನ್ನಾಗಿದೆ. ನಮ್ಮಲ್ಲೇ ಯಾರಾದರೂ ಒಬ್ಬರು ಮೊಬೈಲ್ ಹಿಡಿದುಕೊಂಡು ನಮ್ಮೊಡನೆ ಮಾತನಾಡುತ್ತಲೇ ಟಾಕೀಸ್‌ನೊಳಕ್ಕೆ ಹೋಗಿ ಬರುವುದು, ಎಲ್ಲಾದರೂ ಹೆದರಿಕೆಯಾದರೆ, ಏನಾದರೂ ತೊಂದರೆಯಾದರೆ ನಾವೆಲ್ಲರೂ ಒಳ ಹೋಗುವುದು, ಏನಂತೀರಾ?”

“ಪ್ಲಾನ್ ಚೆನ್ನಾಗೇನೋ ಇದೆ...” ರಕ್ಷಿತ್ ಅನುಮಾನಿಸಿದ. “...ಅಡ್ವೆಂಚರ್ ಅಂತಾ ಹೋಗಿ, ಮಿಸ್-ಅಡ್ವೆಂಚರ್ ಆಗಬಾರದಲ್ಲಾ?”

“ಆಗೋಕೆ ಸಾಧ್ಯವೇ ಇಲ್ಲ! ಒಂದು ಮೊಬೈಲ್ ಬೆಳಕಿಗೆ, ಇನ್ನೊಂದು ಇಲ್ಲುಳಿದವರ ಜೊತೆ ಸಂಪರ್ಕ ಇಟ್ಕೊಳ್ಳೋಕೆ. ಯಾರು ಹೋಗ್ತೀರಾ ಹೇಳಿ? ನೀವ್ಯಾರೂ ಹೋಗಲ್ಲ ಅಂದ್ರೆ ನಾನೇ ಹೋಗ್ತೇನೆ!” ಸತೀಶ ಸಂಪೂರ್ಣ ತಯಾರಾಗಿದ್ದವನಂತೆ ಮಾತನಾಡಿದ.

ಹ್ಯಾರಿ ವಿವರವಾದ ಯೋಜನೆ ಹಾಕಿಕೊಟ್ಟ, “ಅದೆಲ್ಲ ಬೇಡ. ಲಾಟ್ಸ್ ಹಾಕೋಣ. ಹೆಸರು ಬಂದವರು ಹೋಗಿ ಬರಲಿ. ಕತೆಯಲ್ಲಿದ್ದಂತೆಯೇ ಪ್ರೊಜೆಕ್ಟರ್ ರೂಮ್‌ನಲ್ಲಿ ತಮ್ಮದೇನಾದರೂ ವಸ್ತು ಬಿಟ್ಟು ಬರಲಿ, ಬೆಳಿಗ್ಗೆ ನಾವೆಲ್ಲರೂ ಹೋಗಿ ಅದನ್ನೆಲ್ಲ ನೋಡಿ ಬಂದರಾಯ್ತು,” ಸ್ವಲ್ಪ ಹೆದರಿದಂತಿದ್ದ ರಕ್ಷಿತ್ ಕಡೆಗೆ ನೋಡುತ್ತ ಹೇಳಿದ, “...ಲಾಟ್ಸ್‌ನಲ್ಲಿ ಹೆಸರು ಬಂದೂ ಹೆದರಿಕೊಂಡು ಹೋಗಲಾರದವರಿದ್ದರೂ ನೋ ಪ್ರಾಬ್ಲಮ್ಸ್!” ಅವನ ಮಾತಿಗೆ ಎಲ್ಲರೂ ಜೋರಾಗಿ ನಕ್ಕರು.

ರಕ್ಷಿತ್ ಮುಖ ಗಂಟಿಕ್ಕಿದ, “ಹೋಗ್ರೋಲೇ! ನನ್ನ ಹೆಸರು ಬಂದ್ರೆ ಖಂಡಿತಾ ಹೋಗ್ತೀನಿ!”

“ಜೊತೆಗೆ ಒಳಹೋಗಿ ಬಂದವರಿಗೆ ಒಬ್ಬೊಬ್ಬರಿಂದಲೂ ಸಾವಿರ ರೂಪಾಯಿ ಹಾಕಿ ಪಾರ್ಟಿ!” ಹುಡುಗರೆಲ್ಲ ‘ಓ’ಯೆಂದು ಸಮ್ಮತಿ ಸೂಚಿಸಿದರು...

ಎಲ್ಲರೂ ಬಸ್‌ನಿಲ್ದಾಣದೆದುರು ರಸ್ತೆಯ ಆಚೆ, ಸ್ವಲ್ಪದೂರದಲ್ಲಿ, ಅಮಾವಾಸ್ಯೆಯ ಕತ್ತಲೊಳಗೆ ಬೆರ್ಚಪ್ಪನಂತೆ ನೆಟ್ಟಗೆ ನಿಂತಿದ್ದ ಪಾಳುಬಿದ್ದ ಟಾಕೀಸನ್ನೇ ದಿಟ್ಟಿಸಿ ನೋಡಿದರು, ಸತೀಶ ಪರ್ಸಿನೊಳಗಿಂದ ಚೀಟಿ ತೆಗೆದು ಹೆಸರು ಬರೆಯಲಾರಂಭಿಸಿದ...

------------

“ಹೇಳೋ, ‘ರಾಮೇಗೌಡ’ ಸಿಕ್ಕನಾ?” ಅತ್ತ ಕಡೆಯಿಂದ ಸತೀಶ ಕೇಳಿದ.

“ಹಿರಿಯರಿಗೆ ಸ್ವಲ್ಪ ಮರ್ಯಾದೆ ಕೊಡ್ರೋ. ‘ರಾಮೇಗೌಡ’ರು ಅನ್ರೋ!” ಅರುಣ ತನ್ನ ಮೊಬೈಲ್‌ನ ಹ್ಯಾಂಡ್ಸ್ ಫ್ರೀಯಲ್ಲಿ ಬಸ್‌ನಿಲ್ದಾಣದಲ್ಲಿ ಕುಳಿತಿದ್ದವರೊಡನೆ ಮಾತನಾಡುತ್ತಿದ್ದ.

“ಸರಿ, ಸರಿ, ‘ರಾಮೇಗೌಡ’ರು ಸಿಕ್ರಾ?” ಸತೀಶನ ಧ್ವನಿಗೆ ಅತ್ತ ಕಡೆಯಿಂದ ಯಾರೋ-ಹ್ಯಾರಿಯಿರಬೇಕು-‘ವೂಶ್’ ಎನ್ನುವ ಇಲ್ಲದ ಸುಳಿಗಾಳಿಯ ಹಿನ್ನಲೆ ಸಂಗೀತ ಕೊಡುತ್ತಿದ್ದ.

ಸತೀಶ ತನ್ನ ಎಡಗೈಯಲ್ಲಿದ್ದ ಇನ್ನೊಂದು ಮೊಬೈಲ್ ಫೋನ್‌ನಲ್ಲಿದ್ದ ಟಾರ್ಚ್ ಬೆಳಕಿನಲ್ಲಿ ಹೊರ ಪ್ರಾಂಗಣವನ್ನೆಲ್ಲ ಹಾಗೇ ಪರಿಶೀಲಿಸುತ್ತ ನುಡಿದ, “ಇಲ್ಲ... ಅವರಿನ್ನೂ ಸಿಕ್ಕಿಲ್ಲ. ಅವರಿರೋದು ಪ್ರೊಜೆಕ್ಟರ್ ರೂಮ್‌ನಲ್ಲಿ ತಾನೇ?”

“ಸರಿ, ಸರಿ, ಸಿಕ್ಕರೆ ನಮ್ಮಕಡೆಯಿಂದ ಹಾಯ್ ಹೇಳಿಬಿಡು!”

“ಆಯ್ತು ಖಂಡಿತಾ!”

“ಹೇಗಿದ್ರೂ ನಿನ್ನ ಪರಿಚಯ ಅವರಿಗಿದ್ದೇ ಇರುತ್ತೆ. ಅವರು ನಿಮ್ಮಪ್ಪನ ಸ್ನೇಹಿತ ಬೇರೆ!” ಅತ್ತಕಡೆಯಿಂದ ಹಿನ್ನಲೆಯಲ್ಲಿ ಯಾರೋ ವಿಕಟಾಟ್ಟಹಾಸಗೈದರು.

ಥಟ್ಟನೇ ಕಿವಿಯಾಳಕ್ಕೆ ಕೇಳಿಬಂದ ನಗುವಿಗೆ ಬೆಚ್ಚಿ ಬಿದ್ದ ಅರುಣ ಸಾವರಿಸಿಕೊಂಡ, “ನಿಮ್ಮ ಕಡೆಯ ಮಾತುಗಳನ್ನೆಲ್ಲ ಕೇಳಿದ್ರೆ, ‘ರಾಮೇಗೌಡ’ರು ಆಗ್ಲೇ ಪ್ರೊಜೆಕ್ಟರ್ ರೂಮ್ ಬಿಟ್ಟು, ಅಲ್ಲಿ ಬಸ್ ನಿಲ್ದಾಣದ ನಿಮ್ಮ ಗುಂಪಿನೊಳಕ್ಕೇ ಸೇರ್ಕೊಂಡಿದಾರೆ ಅನ್ಸುತ್ತೆ ಕಣ್ರೋ! ಜೋಪಾನ, ನಿಮ್ಮಲ್ಲೇ ಯಾರೊಳಗಾದರೂ ಸೇರಿಕೊಂಡಿರಬಹುದು!” ಅತ್ತಕಡೆಯಿಂದ ಎಲ್ಲರೂ ನಕ್ಕರು, ಹ್ಯಾರಿ ಇನ್ನೂ ವಿಕಾರವಾಗಿ ನಕ್ಕ.

ಚೀಟಿ ಎತ್ತಿದಾಗ ತನ್ನ ಹೆಸರೇ ಬಂದುದು ಕಂಡು ಅರುಣನಿಗೆ ಸಮಾಧಾನವೇ ಆಯಿತು. ಚೀಟಿ ಎತ್ತುವ ಮೊದಲೇ ಅವನು ಸತೀಶನನ್ನು ಬಿಟ್ಟು ಬೇರೆ ಯಾರ ಹೆಸರು ಬಂದಿದ್ದರೂ ತಾನೇ ಹೋಗಲು ನಿರ್ಧರಿಸಿದ್ದ. ಯಾಕೆಂದರೆ ಸತೀಶ ಮತ್ತು ಇವನು ಕಟ್ಟಾ ವಾಸ್ತವವಾದಿಗಳು, ನಾಸ್ತಿಕರು. ಬೇರೆಯವರಿಗೆ ಹೋಲಿಸಿದರೆ ಸ್ವಲ್ಪ ಜಾಸ್ತಿಯೇ ಕ್ರೀಡಾಮನೋಭಾವವುಳ್ಳವರು, ಧೈರ್ಯಶಾಲಿಗಳು. ಅದಲ್ಲದೇ ಅರುಣನಿಗೆ ಈ ಟಾಕೀಸ್‌ನ ನಕಾಶೆ ಅಲ್ಪ ಸ್ವಲ್ಪ ನೆನಪಿತ್ತು. ಹೈಸ್ಕೂಲ್ ಓದುತ್ತಿದ್ದಾಗ ಹಗಲಲ್ಲಿ ಕದ್ದು ಮುಚ್ಚಿ, ಸ್ನೇಹಿತರೊಡಗೂಡಿ, ಇಲ್ಲೆಲ್ಲ ಬಂದು ತಿಳಿದಿತ್ತು. ಹಾಗಾಗಿ ತನ್ನ ಹೆಸರು ಬಂದಾಗ ಧೈರ್ಯವಾಗಿಯೇ ಹೊರಟು ನಿಂತ. ರಕ್ಷಿತನ

ಒಬೀರಾಯನ ಕಾಲದ ಮೊಬೈಲ್‌ನ ಟಾರ್ಚ್ ಅವನಿಗೆ ದಾರಿದೀಪವಾಯ್ತು. ತನ್ನ ಮೊಬೈಲ್‌ನಿಂದ ಸತೀಶನ ಮೊಬೈಲ್‌ಗೆ ಕರೆ ಚಾಲೂ ಇಟ್ಟುಕೊಂಡು, ಕಿವಿಯೊಳಕ್ಕೆ ಹ್ಯಾಂಡ್ಸ್-ಫ್ರೀ ಹಾಕಿಕೊಂಡು ಪಾಳುಬಿದ್ದಿದ್ದ ಟಾಕೀಸ್‌ನ ಕಾಂಪೌಂಡ್ ಗೋಡೆಯೊಳಕ್ಕೆ ಪ್ರವೇಶಿಸಿದ.

ಟಾಕೀಸ್ ಇವನು ವರ್ಷಗಳಾಚೆ ನೋಡಿದ್ದಕ್ಕಿಂತ ಜಾಸ್ತಿ ಪಾಳು ಬಿದ್ದಿತ್ತು. ಕಾಂಪೌಂಡಿನಲ್ಲೆಲ್ಲ ಜೊಂಡು ಹುಲ್ಲು, ಎತ್ತರೆತ್ತರದ ಕಳೆಗಿಡಗಳು ಬೆಳೆದಿದ್ದು, ಬೇಸಿಗೆಗೆ ಒಣಗುತ್ತಿದ್ದವು. ಹಾವುಗಳಿದ್ದಾವೆಂದು ಬಾಯಿಯಲ್ಲಿ ಸಣ್ಣದಾಗಿ 'ಶ್... ಶ್...' ಶಬ್ದ ಮಾಡಿಕೊಂಡು ಇವನು ಕಾಂಪೌಂಡ್ ಒಳಗಿನ ಬಯಲು ದಾಟಿ ಇವನು ಕಟ್ಟಡದ ಹೊರ ಪ್ರಾಂಗಣದ ಮೆಟ್ಟಿಲುಗಳನ್ನು ಹತ್ತಿದ.

ಹೊರ-ಪ್ರಾಂಗಣದಿಂದ ಒಳ ಹಜಾರಕ್ಕೆ ಹೋಗಲು ಟಾಕೀಸ್‌ನ ಎರಡೂ ಬದಿಯಲ್ಲೂ ದೊಡ್ಡದಾದ ಎರಡೆರಡು ಬಾಗಿಲುಗಳಿದ್ದವು. ಬಾಗಿಲುಗಳೊಳಗೆ ಸಣ್ಣದೊಂದು ಪ್ರಾಂಗಣ, ಅದರಿಂದ ನಾಲ್ಕು ನಾಲ್ಕು ಬಾಗಿಲುಗಳಾಚೆ ತೆರೆದುಕೊಂಡ ದೊಡ್ಡ ಸಿನೇಮಾ ಹಾಲ್, ಅದರ ಎಡಕೊನೆಗೆ ಪರದೆಯ ಜಾಗ, ಬಲಕೊನೆಗೆ ಅರ್ಧಮರ್ಧ ಕಟ್ಟಿದ ಬಾಲ್ಕನಿ, ಅದರ ಕಟ್ಟಕಡೆಯ ಗೋಡೆಯಲ್ಲಿ ಎತ್ತರಕ್ಕೆ ದೊಡ್ಡದಾದ ನಾಲ್ಕೈದು ಚಚ್ಚೌಕದ ಕಿಂಡಿಗಳು, ಕಿಂಡಿಗಳಾಚೆಗೆ 'ಪ್ರೊಜೆಕ್ಟರ್ ರೂಮ್'!

ತಲೆಯೊಳಗಿದ್ದ ಕಟ್ಟಡದ ನಕಾಶೆಯನ್ನು ನೆನಪಿಸಿಕೊಂಡೇ ಮೆಲ್ಲನೇ ಒಳ ಪ್ರಾಂಗಣಕ್ಕೆ ಕಾಲಿಟ್ಟ ಅರುಣ. ಮೊಬೈಲ್‌ನ ಅತ್ತಕಡೆಯಿಂದ ಸತೀಶನ ಧ್ವನಿ ಕೇಳಿಬಂತು, "ಯಾಕೋ, ಲೈಟ್ ಆಫ್ ಮಾಡಿಕೊಂಡೆ?"

"ಇಲ್ಲ ಕಣೋ. ಇನ್ನರ್ ಕಾರಿಡಾರ್ ಒಳಗಡೆ ಬಂದೆ, ಹಾಗಾಗಿ ಬೆಳಕು ಅಷ್ಟೇನೂ ಹೊರಕ್ಕೆ ಕಾಣಲ್ಲ."

"ಸರಿ, ನಮಗೆ ರನ್ನಿಂಗ್ ಕಾಮೆಂಟರಿ ಕೊಡು!"

"ಸರಿ, ಇವಾಗ ನಾನು ಇನ್ನರ್ ಕಾರಿಡಾರ್ ಒಳಗಡೆ ಇದೀನಿ, ಒಂದು ಬಾಗಿಲಿನ ಮೂಲಕ ಮೂವಿಹಾಲ್ ಒಳಗಡೆ ಎಂಟರ್ ಆಗ್ತಾ ಇದೀನಿ..."

ಮೂವಿಹಾಲ್‌ನೊಳಕ್ಕೆ ನಡೆದು ಮೊಬೈಲ್‌ನ ಕ್ಷೀಣ ಬೆಳಕನ್ನು, ಎಡಗಡೆಗೆ ಹಾಯಿಸಿದ. ಮೆಟ್ಟಿಲು ಮೆಟ್ಟಿಲಾಗಿ, ಇದ್ದ ನೆಲದ ಕೊನೆಗೆ ಪರದೆಯ ಕಡೆಯ ಐದುಮೂಲೆಯ ಗೋಡೆ, ಮೇಲೆ ಅರ್ಧಮರ್ಧ ಹಾಕಲ್ಪಟ್ಟಿದ್ದ ಕಬ್ಬಿಣದ ಸರಳುಗಳು, ಅವುಗಳ ಮೇಲೆ ಹಳತಾಗಿ ಹೋಗಿದ್ದ ಸಿಮೆಂಟ್ ಛಾವಣಿ ಶೀಟುಗಳು, ಅದಕ್ಕೂ ಮೇಲೆ ಕಪ್ಪುಕತ್ತಲು, ಆಕಾಶ-ಚುಕ್ಕಿಗಳು!

ಎಲ್ಲವನ್ನೂ ಬಸ್-ನಿಲ್ದಾಣದಲ್ಲಿ ಕುಳಿತವರಿಗೆ ವಿವರಿಸುತ್ತಿದ್ದ ಅರುಣನ ಬಲಗಣ್ಣ ಅಂಚಿಗೆ, ಮೇಲೆ ಬಾಲ್ಕನಿಯ ಗೋಡೆಯಲ್ಲಿರುವ ಕಿಂಡಿಗಳಲ್ಲಿ ಏನೋ ಬೆಳಕು ಕಂಡಂತಾಯಿತು! ಥಟ್ಟನೇ ಅತ್ತ ತಿರುಗಿ, ಮೊಬೈಲ್ ಟಾರ್ಚ್‌ನ ಬೆಳಕನ್ನು ಅತ್ತ ಬಿಟ್ಟ. ಅದರ ತೆಳ್ಳಗಿನ ಬೆಳಕಿನಲ್ಲಿ, ಕಿಂಡಿಗಳೊಳಗಿನ ಕತ್ತಲೂ ಹೆಚ್ಚು ಕಪ್ಪಾಗಿ ಕಂಡಿತು, ಯಾವ ಬೆಳಕೂ ಒಳಗಿರಲಿಲ್ಲ. ಅರುಣನಿಗೆ ಎಲ್ಲೋ ಓದಿದ್ದು ನೆನಪಿಗೆ ಬಂತು-ಕತ್ತಲಲ್ಲಿ ಕಣ್ಣ ಪಾಪೆಯ 'ಬ್ಲೈಂಡ್ ಸ್ಪಾಟ್ಸ್'ಗೆ ತಾಗಿದ ಸಣ್ಣ ಬೆಳಕೂ ಕೂಡಾ ಕೆಲವೊಮ್ಮೆ ಇಲ್ಲದ ದೃಶ್ಯಭ್ರಾಂತಿಯನ್ನು ಉಂಟು ಮಾಡುತ್ತದೆ! ಧಡಕ್ಕೆಂದು ಬಿಗಿದುಕೊಂಡ ಎದೆಯನ್ನು ಕಷ್ಟಪಟ್ಟು ಸಡಿಲ ಮಾಡಿಕೊಂಡು ಉಸಿರುಬಿಟ್ಟ. ಅತ್ತಕಡೆಯಿಂದ ಸತೀಶ ಕೇಳಿದ, "ಏನಾಯ್ತೋ?"

"ಏನಿಲ್ಲ! ನಾನೀಗ ವಾಪಸ್ಸು ಇನ್ನರ್-ಕಾರಿಡಾರ್‌ಗೆ ಬರ್ತಾ ಇದೀನಿ, ಈಗ ಟಾಕೀಸ್‌ನ ಹಿಂಬಾಗಕ್ಕೆ, ಬಾಲ್ಕನಿಯ ಮೆಟ್ಟಿಲುಗಳ ಕಡೆಗೆ ನಡೀತಾ ಇದೀನಿ, ತುಂಬಾ ಅಂದರೆ ತುಂಬಾ ಕತ್ತಲಿದೆ! ತುಂಬಾ ಧೂಳು, ಜೇಡ ಕಟ್ಟಿದೆ, ಸಿಮೆಂಟ್ ಆಗಿರೋದರಿಂದ ಅಷ್ಟೇನೂ ಗಿಡ-ಗಂಟಿ ಬೆಳೆದಿಲ್ಲ. ಆದ್ರೆ..." ಅರುಣನ ಮಾತು ಹೂತು ಹೋಯಿತು!

ಬಾಲ್ಕನಿಯ ಮೆಟ್ಟಿಲುಗಳು, ಮೆಟ್ಟಿಲಿನ ಸರಣಿಯ ಕೆಳಗೆ ಕಪ್ಪು-ಕಪ್ಪುಕತ್ತಲು, ಮೆಟ್ಟಿಲುಗಳು ಅಂಟಿಕೊಂಡಿರುವ ಗೋಡೆಯಲ್ಲಿ, ಉದ್ದಕ್ಕೂ ಎಳೆದಿರುವ ಅಡ್ಡಾದಿಡ್ಡಿ ಗೀರುಪಟ್ಟಿಗಳು! ಧೂಳು ಹಿಡಿದ ಗೋಡೆಯಲ್ಲಿ, ಹರಿತವಾದ ಆಯುಧದಿಂದ ಬಲವಾಗಿ ಎಳೆದಂತೆ ಗೀರುಗಳು, ಕೆಲವೊಂದು ಕಡೆ, ಗೀರುಗಳು ಯಾವುದೋ ದ್ರವ ಸುರಿದಂತೆ ಕಪ್ಪಗಾಗಿದ್ದವು. ಅರುಣ ತನ್ನ ತೋರು ಬೆರಳಿಂದ ಕಪ್ಪು ಗೀರನ್ನೇ ಮುಟ್ಟಿ ನೋಡಿದ. ಅವನ ಕೈಗೆ ಕಪ್ಪನೆಯ ದ್ರವ ಅಂಟಿಕೊಂಡಿತು!

ಸತೀಶ ಕಿರುಚಿಕೊಳ್ಳುತ್ತಿದ್ದ, "ಅರುಣಾ!"

"ಹ್ಞ! ಇಲ್ಲೇ ಇದೀನಿ ಕಣೋ!" ಯಾಕೋ ಮೊಬೈಲ್‌ನ ಮಾತು ಅಸ್ಪಷ್ಟವಾಗತೊಡಗಿದ್ದವು. ಅರುಣ ಧೈರ್ಯವಾಗಿ ನುಡಿದ, "ಯಾಕೋ ಮಾತುಗಳು ಸ್ಪಷ್ಟವಾಗಿ ಕೇಳ್ತಾ ಇಲ್ಲ. ನಾನೀಗ ಬಾಲ್ಕನಿಯ ಮೆಟ್ಟಿಲುಗಳ ಹತ್ತಿ ಮೇಲೆ ಹೋಗ್ತಾ ಇದೀನಿ..."

ಮೆಲ್ಲ ಮೆಲ್ಲನೆ ಬಾಲ್ಕನಿಯ ಮೆಟ್ಟಿಲುಗಳನ್ನು ಹತ್ತಿ, ಬಾಲ್ಕನಿಯ ಬಾಗಿಲು ಪ್ರವೇಶಿಸಿ, ಸುತ್ತ ಬೆಳಕು ಬಿಟ್ಟು ನೋಡಿದ. ಅದೂವರೆಗೂ ತನ್ನ ಎಡಗೈಲಿದ್ದ ಮೊಬೈಲ್ ಟಾರ್ಚನ್ನು ಬಲಗೈಗೆ ತೆಗೆದುಕೊಂಡ ಅರುಣನಿಗೆ, ತನ್ನ ಬಲಗೈ ತೋರುಬೆರಳಿಗೆ ಹತ್ತಿಕೊಂಡಿದ್ದ ಕಪ್ಪು ದ್ರವ ಮೊಬೈಲ್‌ಗೆ ಒರೆಸಲ್ಪಟ್ಟು ತೆಳ್ಳಗಾದಾಗ ಕಡು-ಕೆಂಪು ಬಣ್ಣ ತಾಳಿತೆಂದು ಗೊತ್ತಾಗಲಿಲ್ಲ!

ಬಾಲ್ಕನಿ ಖಾಲಿಯಾಗಿತ್ತು! ಅರುಣನಿಗೆ ತನ್ನ ಯೋಚನೆಗೇ ನಗುಬಂತು. ಖಾಲಿಯಿರದೇ, ಬಾಲ್ಕನಿಯಲ್ಲಿ ಏನಿದ್ದೀತು, ಏನಿರಬೇಕಾಗಿತ್ತು ಅಂದುಕೊಂಡಿತ್ತೋ ತನ್ನ ಮನಸ್ಸು ಅಂತ ಸಮಾಧಾನದ ಉಸಿರು ಬಿಟ್ಟ. ಎಲ್ಲವನ್ನೂ ಸತೀಶನಿಗೆ ಹೇಳಿದ, ಆದರೆ ಆ ಗೀರುಗಳ ವಿಚಾರವೊಂದನ್ನು ಮಾತ್ರ ಬಿಟ್ಟು!

ಮತ್ತೆ ಹಿಂತಿರುಗಿ, ಬಾಲ್ಕನಿಯಿಂದ ಹೊರಬಂದು, ತನ್ನ ಎಡಕ್ಕಿದ್ದ ಸಣ್ಣ ಮೆಟ್ಟಿಲುಗಳ ಸರಣಿಯನ್ನು ನೋಡಿದ. ಆ ಮೆಟ್ಟಿಲುಗಳ ಸರಣಿಯ ಕೊನೆಗೆ 'ಪ್ರೊಜೆಕ್ಟರ್ ರೂಂ' ಇತ್ತು. ಪ್ರೊಜೆಕ್ಟ್ ರೂಮಿನ ಬಾಗಿಲು, ಬಾಗಿಲಿನೊಳಗಿನ ಕತ್ತಲು, ಕತ್ತಲಿನಾಚಿನ ಅಗಮ್ಯ, ಅಗೋಚರ ಸಂಗತಿ ಎಲ್ಲವನ್ನು ಜಯಿಸಲು ಇನ್ನೈದು ನಿಮಿಷಗಳು ಅಷ್ಟೇ!

ಯಾಕೋ ಮೊಬೈಲ್‌ನ ಮಾತುಗಳು ಅಸ್ಪಷ್ಟವಾಗತೊಡಗಿದ್ದವು. ಅರುಣ ಸ್ಪಷ್ಟವಾಗಿ ಮೊಬೈಲ್‌ನೊಳಕ್ಕೆ ನುಡಿದ, "ನೋಡ್ರೋ ನಾನೀಗ ಪ್ರೊಜೆಕ್ಟರ್ ರೂಮ್‌ಗೆ ಹೋಗೋ ಸ್ಟೇರ್‌ಕೇಸ್ ಕೆಳಗಿದೀನಿ. ಇನ್ನೇನು ಐದು ನಿಮಿಷ, ಪಾರ್ಟಿ ಕೊಡೋಕೆ ದುಡ್ಡು ಕಲೆಕ್ಟ್ ಮಾಡ್ಕೊಳಿ!" ಮಾತನಾಡುತ್ತಲೇ ಅರುಣನಿಗೆ ಯಾಕೋ ಛಳಿಯೆನಿಸಿತು. ಬೆನ್ನ ಹುರಿಯಾಳದಿಂದ ಹೊರಟ ನಡುಕ ಅವನ ಎದೆಯನ್ನು ನಡುಗಿಸಿತು. ಉಸಿರು ಭಾರವಾಯಿತು. ಗಾಳಿಯಿಲ್ಲದ ನಿರ್ವಾತ ಸೃಷ್ಟಿಯಾದಂತಾಯಿತು. ಅತ್ತ ಕಡೆಯಿಂದ ಹ್ಯಾರಿ ಕೇಕೆ ಹಾಕುತ್ತಿದ್ದ, "'ರಾಮೇಗೌಡ' ಇನ್ನೂ ಕಾಣಲಿಲ್ಲವೇನೋ? ಪ್ರೊಜೆಕ್ಟರ್ ರೂಂನಲ್ಲೇ ಮಲಗಿರ್ತಾನೆ, ಜೋಪಾನ!" ಅರುಣನ ಹಣೆಯ ಮೇಲೆ ತಣ್ಣಗಿನ ಬೆವರ ಹನಿಗಳು ಸಾಲುಗಟ್ಟಿದವು. ತನ್ನ ಹಣೆಯ ಮೇಲಿಂದ ಮೂಗಿನ ಕಂಬದಗುಂಟ ಏನೋ ಹರಿದಾಡಿದಂತಾಗಿ ಬಲಗೈಯಿಂದ ಹಣೆ ಮುಟ್ಟಿಕೊಂಡವನಿಗೆ ಅದು ತನ್ನದೇ ಬೆವರಿನ ಧಾರೆಯೆಂದು ಗೊತ್ತಾಯಿತು. ದೀರ್ಘವಾದ ನಿಟ್ಟುಸಿರೆಳೆದುಕೊಂಡು ಎಡಕ್ಕೆ ತಿರುಗಿ 'ಪ್ರೊಜೆಕ್ಟರ್ ರೂಮಿ'ಗೆ ಹೋಗುವ ಮೊದಲನೇ ಮೆಟ್ಟಿಲ ಮೇಲೆ ಎಡಗಾಲಿಟ್ಟವನಿಗೆ ಕೇಳಿತ್ತು ಆ ಭಯಾನಕ ಶಬ್ದ!

ಥಟ್ಟನೆ ಬೆಚ್ಚಿ ಬಿದ್ದ ಅರುಣನಿಗೆ ಸಿಟ್ಟುಬಂತು, "ಸುವ್ವರ್ ನನ್ಮಗ ಹ್ಯಾರಿಗೆ ಬೇರೆ ಕೆಲಸ ಇಲ್ಲ!" ಅಂದುಕೊಂಡವನಿಗೆ ಮೊಬೈಲಿನ ಕರಕರದ ನಡುವೆ ಸತೀಶನ ಧ್ವನಿ ಕೇಳಿಸಿತು, "ಅರುಣಾ, ಏನೋ ಅದು ಶಬ್ದಾ?!" 'ಏನು? ಆ ಶಬ್ದ ಮೊಬೈಲಿನ ಅತ್ತ ಕಡೆಯಿಂದ ಬಂದುದಲ್ಲವೇ?' ಯೋಚಿಸುತ್ತಿದ್ದ ಮರುಕ್ಷಣದಲ್ಲೇ ತನ್ನ ಹಿಂದೆ ಯಾರೋ, ಏನೋ ಇದ್ದಂತಾಗಿ ಥಟ್ಟನೆ ಹಿಂತಿರುಗಿದ ಅರುಣ!

ಭೂಮಿಯ ಕಾಂತೀಯ ಶಕ್ತಿಯ ಪ್ರಭಾವವೋ; ಕಿವಿಗೆ ಕೇಳಿಸದ ಸೂಕ್ಷ್ಮ ತರಂಗಾಂತರಗಳ ಶಬ್ದವೋ; ಕಟ್ಟಡದ ಒಳ ಹೊಕ್ಕು, ಯಾವ್ಯಾವುದೋ ಕೋನದಲ್ಲಿ ತಿರುಗಿಕೊಂಡು ಯಾವುದೋ ಮೂಲೆಗೆ ತಾಗಿ, ವಿಚಿತ್ರ ಅನುಭೂತಿ ನೀಡುವ ಸುಳಿಗಾಳಿಯ ಮಾರುತವೋ, ಪ್ರೇತವೋ, ಆತ್ಮವೋ, ಏನೋ ಒಂದು ಇವೆಲ್ಲಕ್ಕೂ ಮೀರಿದ, ಇವೆಲ್ಲಕ್ಕೂ ತಾಗಿದ, ಜೊತೆಗೆ ಇವೆಲ್ಲದಕ್ಕೂ ಬೇರೆಯಾದ ಅನುಭೂತಿಯೊಂದು ಬೆಚ್ಚಿ ಬೆದರಿ ತಿರುಗಿದ ಅರುಣನಿಗಾಯಿತು. ತನ್ನ ಹಿಂದಿದ್ದ ಅಮಾವಾಸ್ಯೆಯ ಗಾಢಾಂಧಕಾರದಲ್ಲಿ ಭಯಂಕರವಾದದ್ದೇನೋ ಕಂಡ ಅವನ ದೇಹ ಮರಗಟ್ಟಿತು. ಕಾದ ಕಾವಲಿಗೆ ನೀರು ತಾಕಿಸಿದಾಗ ಥಟ್ಟನೆ ತಣ್ಣಗಾಗುವ ರೀತಿ ತಣ್ಣಗಾಗಲಾರಂಭಿಸಿದ ದೇಹದ ಹೋರೊಡೆಯುವ ಹೃದಯದ ಕೊನೆಯ ಬಡಿತಗಳ ಕೊನೆಯಲ್ಲಿ ಅರುಣನಿಗೆ ಒಂದು ಸಂಗತಿ ಮನದಟ್ಟಾಯಿತು – 'ತನ್ನಪ್ಪನ ಪೀಳಿಗೆಗೆ ಅವರ ಸ್ನೇಹಿತ ರಾಮೇಗೌಡನಂತೆ, ತನ್ನ ಪೀಳಿಗೆಯವರ ಹಾರರ್ ಸ್ಟೋರಿಗಳಿಗೆ, ಪ್ರೇತಾತ್ಮಗಳ ಕತೆಗಳಿಗೆ ಕೊನೆಗೂ ತಾನು ತರ್ಕಬದ್ಧವಾದ, ಆದರೆ ತರ್ಕಕ್ಕೆ ನಿಲುಕದ ಉದಾಹರಣೆಯಾಗಿಬಿಟ್ಟೆ!'

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** ks_shivu@yahoo.com